ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 24ನೇ ಆರ್ಥಿಕ ಸಮಿತಿ ಸಭೆಯ ನಡಾವಳಿಗಳು

**ದಿನಾಂಕ:09-09-2020, ಬುಧವಾರ,**
**ಸಂಜೆ: 4.00 ಗಂಟೆಗೆ,**

**ಸ್ಥಳ: ವೈದ್ಯಕೀಯ ಶಿಕ್ಷಣ ಇಲಾಖೆಯ ಸಭಾ ಕೊಠಡಿ,**
**ಸಂಖ್ಯೆ: 601, 6ನೇ ಮಹಡಿ, 4ನೇ ಗೇಟ್,**
**ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು.**

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599,
Email:directorhims@yahoo.com

# 24ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 24ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:09-09-2020ರಂದು ಬುಧವಾರ ಸಂಜೆ 4.00 ಗಂಟೆಗೆ ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ: 09**

| | | | |
|---|---|---|---|
| 1 | ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವೈದ್ಯಕೀಯ ಶಿಕ್ಷಣ ಇಲಾಖೆ,<br>ಬಹುಮಹಡಿಗಳ ಕಟ್ಟಡ,<br>6ನೇ ಮಹಡಿ, 4ನೇ ಹಂತ,<br>ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ,<br>ವಿಧಾನ ಸೌಧ,<br>ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ<br>(Zoom Meeting) |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,<br>ಯೋಜನಾ ಇಲಾಖೆ,<br>ವಿಧಾನ ಸೌಧ,<br>ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ<br>(Zoom Meeting) |

| | | | |
|---|---|---|---|
| | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವೈದ್ಯಕೀಯ ಶಿಕ್ಷಣ ಇಲಾಖೆ,<br>ಬಹುಮಹಡಿಗಳ ಕಟ್ಟಡ,<br>6ನೇ ಮಹಡಿ, 4ನೇ ಹಂತ,<br>ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 5 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಆನಂದರಾವ್ ವೃತ್ತ,<br>ಬೆಂಗಳೂರು | ಸದಸ್ಯರು | ಹಾಜರಿರುವುದಿಲ್ಲ |
| 6 | ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 8 | ಪ್ರಾಂಶುಪಾಲರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಸಲಹೆಗಾರರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. | ಸದಸ್ಯ<br>ಕಾರ್ಯದರ್ಶಿ | ಹಾಜರಿರುತ್ತಾರೆ |

# ಅಜೆಂಡಾ ಕ್ರಮ ಸಂಖ್ಯೆ:01

**ವಿಷಯ: ದಿನಾಂಕ:06-03-2020ರಂದು ನಡೆದ 23ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದರ ಬಗ್ಗೆ.**

*-*-*

ಪ್ರಸ್ತಾವನೆ:

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 23ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರುವರ ಅಧ್ಯಕ್ಷತೆಯಲ್ಲಿ ದಿನಾಂಕ:06-03-2020 ರಂದು ನೆರವೇರಿದ್ದು, ಸದರಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸಂಸ್ಥೆಯಿಂದ ವಹಿಸಿರುವ ಕ್ರಮಗಳ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

ತೀರ್ಮಾನ:

ಸದರಿ ಪ್ರಸ್ತಾವನೆಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ದಿನಾಂಕ:06-03-2020ರಂದು ನಡೆದ 23ನೇ ಆರ್ಥಿಕ ಸಮಿತಿ ಸಭೆಯಲ್ಲಿ 18 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡಿದ್ದ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು ಸದರಿ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 02

**ವಿಷಯ: 2020–21ನೇ ಸಾಲಿನಲ್ಲಿ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶೆ.**

*–*–*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ 2020–21ನೇ ಸಾಲಿಗೆ ವಿವಿಧ ಲೆಕ್ಕ –ಶೀರ್ಷಿಕೆಯಡಿ ನಿಗದಿಯಾಗಿರುವ ಅನುದಾನ, ಸದರಿ ಅನುದಾನದಲ್ಲಿ ಮಾಡಲಾಗಿರುವ ವೆಚ್ಚದ ವಿವರ ಮತ್ತು ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶಿಸುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ಎ) 2020–21ನೇ ಸಾಲಿಗೆ ಸರ್ಕಾರದಿಂದ ನಿಗದಿಯಾಗಿರುವ, ಬಿಡುಗಡೆಯಾಗಿರುವ ಮತ್ತು ಖರ್ಚಾದ ಅನುದಾನದ ವಿವರ**

| ಕ್ರ. ಸಂ | ಲೆಕ್ಕಶೀರ್ಷಿಕೆ | 2020–21ನೇ ಸಾಲಿಗೆ ನಿಗದಿಯಾಗಿರುವ ಅನುದಾನ | 2020–21ನೇ ಸಾಲಿಗೆ ಪ್ರಾರಂಭಿಕ ಶಿಲ್ಕು | 2020–21ನೇ ಸಾಲಿನಲ್ಲಿ ಬಿಡುಗಡೆ ಯಾಗಿರುವ ಅನುದಾನ | ಒಟ್ಟು (4+5=6) | ವೆಚ್ಚಗಳ ವಿವರ (ದಿನಾಂಕ: 30.08.2020) ರ ಅಂತ್ಯಕ್ಕೆ (6–7=8) | ಉಳಿಕೆ ಮೊತ್ತದ ವಿವರ (ದಿನಾಂಕ: 30.08.2020) ರ ಅಂತ್ಯಕ್ಕೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | 2210–101 ವೇತನಗಳು | 717,412,000 | 271,400,000 | 119,568,000 | 390,968,000 | 242,367,000 | 148,601,000 |
| 2 | 2210–103 ಸಾಮಾನ್ಯ ವೆಚ್ಚ | 131,000,000 | 7,900,000 | 32,748,000 | 40,648,000 | 20,900,000 | 19,748,000 |
| 3 | 2210–115 ಹೊರಗುತ್ತಿಗೆ | 84,500,000 | 31,253,000 | 21,125,000 | 52,378,000 | 37,884,000 | 14,494,000 |
| 4 | 2210–118 ವಿಶ್ರಾಂತಿವೇತನ | 1,700,000 | – | 282,000 | 282,000 | – | 282,000 |
| 5 | 2210–422 ಎಸ್.ಸಿ | 12,700,000 | 1,350,000 | 3,175,000 | 4,525,000 | 241,000 | 4,284,000 |
| 6 | 2210–423 ಎಸ್.ಟಿ | 6,300,000 | 3,680,000 | 1,575,000 | 5,255,000 | 6,000 | 3,674,000 |
| 7 | 4210–422 ಎಸ್.ಸಿ | 75,000,000 | – | – | – | – | – |
| 8 | 4210–423 ಎಸ್.ಟಿ | 25,000,000 | – | – | – | – | – |
| 9 | 4210–386 ಉಪಕರಣ/ ಕಾಮಗಾರಿ | 133,333,000 | 54,060,000 | – | 54,060,000 | – | 54,060,000 |
| 10 | 4210–139 ಪ್ರಧಾನಕಾಮಗಾರಿ | 100,000,000 | 150,000,000 | – | 150,000,000 | – | 150,000,000 |
| | ಒಟ್ಟು | **1,286,945,000** | **519,643,000** | **178,473,000** | **698,116,000** | **301,398,000** | **395,143,000** |

ಬಿ) 2020-21 ನೇ ಸಾಲಿನ ಯೂಸರ್ಸ್ ನಿಧಿಯ ಸಂಗ್ರಹ ಮತ್ತು ಖರ್ಚು ವೆಚ್ಚದ ವಿವರ

| ಕ್ರಸಂ | ಪ್ರಾರಂಭಿಕ ಶಿಲ್ಕು | ಆದಾಯ | | | ಒಟ್ಟು (ಆದಾಯ+ ಪ್ರಾ.ಶಿ.) | ಖರ್ಚು | ಉಳಿಕೆ |
|---|---|---|---|---|---|---|---|
| | | ಸಂಗ್ರಹ | ಇತರೆ | ಒಟ್ಟು | | | |
| 11 | 93,833,395 | 9,466,462 | 11,306,087 | 20,772,549 | 114,605,944 | 69,663,351 | 44,942,593 |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಗೆ ಸರ್ಕಾರದಿಂದ 2020-21ನೇ ಸಾಲಿಗೆ ವಿವಿಧ ಲೆಕ್ಕ -ಶೀರ್ಷಿಕೆಯಡಿ ನಿಗದಿಯಾಗಿರುವ ಅನುದಾನ, ಸದರಿ ಅನುದಾನದಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ಮಾಡಲಾಗಿರುವ ವೆಚ್ಚದ ವಿವರ ಮತ್ತು ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ವಿವರವನ್ನು ಪರಿಶೀಲಿಸಿ ಒಪ್ಪಿ ಅನುಮೋದಿಸಲಾಯಿತು ಹಾಗು ಸಂಸ್ಥೆಗೆ ಸಂಬಂಧಿಸಿದ ಬ್ಯಾಂಕ್ ವ್ಯವಹಾರಗಳನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಒಂದೇ ಕಡೆ ನಿರ್ವಹಿಸುವಂತೆ ಸೂಚಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 03

**ವಿಷಯ: ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2019–20ನೇ ಸಾಲಿನ ಲೆಕ್ಕ–ಪರಿಶೋಧನೆಯನ್ನು M/s. Harish Gowda & Co, ಚಾರ್ಟರ್ಡ್‌ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಸಲ್ಲಿಸಿದ್ದು ಸದರಿ ಆಡಿಟ್ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.**

*–*–*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಹಾಸನ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹೊಳೆನರಸೀಪುರ ಮತ್ತು ವಿದ್ಯಾರ್ಥಿ ವಸತಿ ನಿಲಯಗಳ 2019–20ನೇ ಸಾಲಿನ ಲೆಕ್ಕ–ಪರಿಶೋಧನೆಯನ್ನು ಸಂಸ್ಥೆಯಿಂದ ನೇಮಕಮಾಡಿರುವ ಶ್ರೀ. **M/s. Harish Gowda & Co**, ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಲೆಕ್ಕ–ಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಡಿಟ್ ವರದಿಯನ್ನು ಪರಿಶೀಲಿಸಿ ಅನುಮೋದನೆ ಪಡೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ಚರ್ಚೆ:**

M/s. Harish Gowda & Co, ಚಾರ್ಟರ್ಡ್ ಅಕೌಂಟೆಂಟ್, ಹಾಸನ. ಇವರು ಪೂರ್ಣಗೊಳಿಸಿ ಸಲ್ಲಿಸಿದ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ ಸದರಿ ಆಡಿಟ್ ವರದಿಯ ಪೈಕಿ Significant accounting policies and notes on accounts forming part of balance sheet Sl No:10(b) ಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ರೂ.7,65,30,912.00ಗಳನ್ನು ಉಪಯೋಗಿಸದೆ ಬಾಕಿ ಉಳಿಸಿಕೊಂಡಿರುವ ಬಗ್ಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ವಿಷಯವನ್ನು ಪ್ರಸ್ತಾಪಿಸಿದರು.

ಸಂಸ್ಥೆಯ ಆರ್ಥಿಕ ಸಲಹೆಗಾರರು ಸದರಿ ವಿಷಯದ ಬಗ್ಗೆ ವಿವರಣೆ ನೀಡುತ್ತಾ ಸರ್ಕಾರದ 2011–12ನೇ ಸಾಲಿನ ಮಾರ್ಗಸೂಚಿಯಲ್ಲಿ ಅನುಷ್ಠಾನಗೊಳಿಸಬೇಕಾದ ಕಾಮಾಗಾರಿಯ ಶೇಕಡ 23 ರಷ್ಟನ್ನು ಮಾತ್ರ ಯೋಜನೆ ಖಾತೆಯಿಂದ ಬಳಸಿಕೊಂಡು ಉಳಿದ ಶೇಕಡ 77 ರಷ್ಟು ಮೊತ್ತವನ್ನು ಸಂಸ್ಥೆಯ ಸಾಮಾನ್ಯ ನಿಧಿಯಿಂದ ಭರಿಸಬೇಕಾಗಿತ್ತು, ಆದರೆ ಸಂಸ್ಥೆಗೆ 4210(386) ಲೆಕ್ಕಶೀರ್ಷಿಕೆಯಡಿ ಆ ಸಾಲಿನಲ್ಲಿ ಇತರೆ ಯಾವುದೇ ಮೂಲದ ಅನುದಾನವು ಬಿಡುಗಡೆಯಾಗದ ಕಾರಣ ಸದರಿ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆಡಿಟ್ ವರದಿಯಲ್ಲಿ ತೋರಿಸಿರುವ ಮೊತ್ತ ರೂ.7,65,30,912.00ಗಳಲ್ಲಿ ನಂತರದ ಅವಧಿಗಳಲ್ಲಿ ಲೋಕೋಪಯೋಗಿ ಇಲಾಖೆ, ಹಾಸನ. ಇವರಿಂದ ಉಪನ್ಯಾಸಕ ಕೊಠಡಿ ಮತ್ತು ಇತರೆ ಕಾಮಾಗಾರಿಗಳಿಗೆ ಠೇವಣಿಮಾಡಿರುವ ಮೊತ್ತ ರೂ.1,99,61,209.00ಗಳನ್ನು ಕಳೆದು ಉಳಿಕೆ ಮೊತ್ತ ರೂ.5,65,69,703.00ಗಳು ಲಭ್ಯವಿರುತ್ತದೆ.

ಈ ಮೊತ್ತದಲ್ಲಿ ದಿನಾಂಕ:25.07.2015 ರಲ್ಲಿ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ, ಕಾಲೇಜು ಕಟ್ಟಡಕ್ಕೆ, ಒಳ ಮತ್ತು ಹೊರಭಾಗಕ್ಕೆ ಬಣ್ಣ ಬಳಿಯುವುದು ಮತ್ತು ಟೆರಸ್ ವಾಟರ್‌ಪ್ರೂಫ್

ಲೀಕೇಜ್ ಕಾಮಾಗಾರಿಗಳು ಹಾಗೂ ಇತರೆ ದುರಸ್ತಿ ಕಾಮಾಗಾರಿಗಳಿಗೆ ರೂ175.50 ಲಕ್ಷಗಳನ್ನು ಉಪಯೋಗಿಸಿಕೊಳ್ಳಲು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ತಿರಸ್ಕೃತವಾಗಿರುತ್ತದೆ.

ದಿನಾಂಕ:03.11.2015 ರಂದು ನಡೆದ 8ನೇ ಕಾಮಾಗಾರಿ ಸಮಿತಿಯಲ್ಲಿ ಅನುಮೋದನೆ ಪಡೆದು ಕಾಲೇಜು ಕಟ್ಟಡದ 5ನೇ ಮಹಡಿಯಲ್ಲಿ ಪರೀಕ್ಷಾ ಕೊಠಡಿ ಮತ್ತು ಸಿಬ್ಬಂದಿ ಕೊಠಡಿ ನಿರ್ಮಾಣ ಮಾಡಲು ರೂ286.00 ಲಕ್ಷಗಳನ್ನು ಉಪಯೋಗಿಸಿಕೊಳ್ಳಲು ದಿನಾಂಕ:19.01.2016 ರಂದು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ತಿರಸ್ಕೃತವಾಗಿರುತ್ತದೆ.

ದಿನಾಂಕ:09.02.2016ರಂದು ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ನಿರ್ಮಾಣ ಮಾಡಲು ರೂ.1000 ಲಕ್ಷಗಳನ್ನು ಉಪಯೋಗಿಸಿಕೊಳ್ಳಲು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ತಿರಸ್ಕೃತವಾಗಿರುತ್ತದೆ.

ದಿನಾಂಕ:20.02.2019ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆ 4210 ಅಡಿಯಲ್ಲಿನ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಿಮಿತವಾಗಿ ವಿದ್ಯಾರ್ಥಿನಿಲಯಗಳ ಕಟ್ಟಡವನ್ನು ನಿರ್ಮಿಸುವ ಕಾಮಾಗಾರಿಗಳಿಗೆ ಬಳಸಿಕೊಳ್ಳಲು ಹಾಗೂ ಈ ನಿಟ್ಟಿನಲ್ಲಿ ನಿಗದಿಯಾಗಿರುವ ರಾಜ್ಯ ಸರ್ಕಾರದ ಕೋಟಾದಡಿಯ ಹಣವನ್ನು ಲೈಬ್ರರಿ ಕಟ್ಟಡವನ್ನು ನಿರ್ಮಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಅನುಮೋದನೆ ಪಡೆಯಲು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ತಿರಸ್ಕೃತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ:29.01.2020 ರಂದು ಸದರಿ ಅನುದಾನದಲ್ಲಿ ಹಿಮ್ಸ್, ಸಂಸ್ಥೆಯಲ್ಲಿ ನಿರ್ಮಾಣವಾಗುತ್ತಿರುವ ಹಾಸ್ಟೆಲ್ ಕಟ್ಟಡದ ಟೆಂಡರ್ ಪ್ರೀಮಿಯಮ್ ಹೆಚ್ಚುವರಿ ಮೊತ್ತಕ್ಕೆ ಬಳಸಿಕೊಳ್ಳುವುದರ ಮೊತ್ತಕ್ಕೆ ಅನುಮೋದನೆ ಕೋರಲಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಬಾಕಿ ಇರುತ್ತದೆಂಬ ಮಾಹಿತಿಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

M/s. Harish Gowda & Co, ಚಾರ್ಟರ್ಡ್ ಅಕೌಂಟೆಂಟ್, ಹಾಸನ. ಇವರು ಹಿಮ್ಸ್, ಸಂಸ್ಥೆಯ 2019-20ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿ ಸಲ್ಲಿಸಿದ ಆಡಿಟ್ ವರದಿಯನ್ನು ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆ ಯಡಿ ವಿವಿಧ ವಾರ್ಷಿಕ ಸಾಲುಗಳಲ್ಲಿ ಬಿಡುಗಡೆಯಾಗಿ ಬಳಕೆಯಾಗದೆ ಮುಂದುವರೆಯುತ್ತಾ ಬಂದಿರುವುದನ್ನು ಆಡಿಟ್ ವರದಿಯಲ್ಲಿ ನಮೂದಿಸಿರುವುದರಿಂದ ಸದರಿ ಅನುದಾನವನ್ನು ಉದ್ದೇಶಿತ ಯೋಜನೆಗೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಹಾಲಿ ನಿರ್ಮಾಣವಾಗುತ್ತಿರುವ ವಿದ್ಯಾರ್ಥಿ ವಸತಿ ನಿಲಯದ ಕಟ್ಟಡದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವುದು, ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬೋಧಕೇತರ ಸಿಬ್ಬಂದಿಯವರಿಗೆ ವಸತಿ ಗೃಹ ನಿರ್ಮಿಸುವುದು ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೊರಗುತ್ತಿಗೆ ನೌಕರರಿಗೆ ವಿಶ್ರಾಂತಿ ಕೊಠಡಿ ನಿರ್ಮಿಸುವುದರ ಬಗ್ಗೆ ಅನುಮೋದನೆ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 04

ವಿಷಯ:ಹಿಮ್ಸ್ ಆಸ್ಪತ್ರೆ / ಕಾಲೇಜು / ನರ್ಸಿಂಗ್ ಕಾಲೇಜು ಹಾಸನ ಮತ್ತು ಹೊಳೆನರಸೀಪುರ ಇಲ್ಲಿನ ಗಣಕಯಂತ್ರಗಳ ಮತ್ತು ಎ.ಬಿ.ಜಿ.ಯಂತ್ರಗಳ ನಿರ್ವಹಣೆಗೆ ಅಗತ್ಯವಿರುವ **Catridge Refilling & Drum Replacement**ಗಳನ್ನು ನಿಯಮಾನುಸಾರ ಇ-ಟೆಂಡರ್ ಕರೆಯುವ ಬಗ್ಗೆ.

*-*-*

ಪ್ರಸ್ತಾವನೆ:

1) ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆಯ ಹೊಸ ಬೊದಕ ಆಸ್ಪತ್ರೆ, ಶ್ರೀ ಚಾಮರಾಜೇಂದ್ರ ಹಳೆ ಆಸ್ಪತ್ರೆ, ಹಿಮ್ಸ್ ಕಾಲೇಜು, ನರ್ಸಿಂಗ್ ಕಾಲೇಜು ಹಾಸನ ಮತ್ತು ಹೊಳೆನರಸೀಪುರ ಇಲ್ಲಿನ ಕಛೇರಿ ಮತ್ತು ರೋಗಿಗಳಿಗೆ ಸಂಬಂಧಿಸಿದ ಗಣಕಯಂತ್ರಗಳ ಮುದ್ರಣ ಕಾರ್ಯವನ್ನು ಈ ವರೆಗೆ ದರಪಟ್ಟಿ ಮೂಲಕ ನಿರ್ವಹಿಸಲಾಗುತ್ತಿರುತ್ತದೆ. ಆದರೆ ಸದರಿ ಎಲ್ಲ ವಿಭಾಗಗಳ ಗಣಕಯಂತ್ರಗಳಿಗೆ ಮುದ್ರಣಕ್ಕೆ ಅವಶ್ಯವಿರುವ Catridge refilling & Drum Replacementಗಳ ಅಂದಾಜು ವೆಚ್ಚವು ವಾರ್ಷಿಕವಾಗಿ ರೂ.4.50ಲಕ್ಷಗಳಿಗಿಂತ ಹೆಚ್ಚಾಗುತ್ತಿರುವುದರಿಂದ ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಟೆಂಡರ್ ಕರೆದು ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2210-05-105-149-103 ಅಡಿಯಲ್ಲಿ ಭರಿಸಲು ಅನುಮೋದಿಸಲು ಕೋರಿದೆ.

ಮತ್ತು

2) ಸಂಸ್ಥೆಯ ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆಯ ಎಸ್.ಎನ್.ಸಿ.ಯು. ಮತ್ತು ಐ.ಸಿ.ಯು. ವಿಭಾಗಗಳಲ್ಲಿ ರೋಗಿಗಳ ಚಿಕಿತ್ಸೆಗಾಗಿ M/s Abbot Helthcare pvt Ltd. ಸಂಸ್ಥೆಯವತಿಯಿಂದ ಎ.ಬಿ.ಜಿ. ಯಂತ್ರಗಳನ್ನು ಸರಬರಾಜು ಪಡೆಯಲಾಗಿರುತ್ತದೆ. ಮುಂದುವರೆದು ಸದರಿ ಯಂತ್ರಗಳಿಗೆ ಅಗತ್ಯವಿರುವ CG8+ ಮತ್ತು EG7+ Catridgeಗಳನ್ನು ಸರಬರಾಜು ಮಾಡಲು ಸದರಿ ಮೂಲ ತಯಾರಿಕಾ ಸಂಸ್ಥೆಯು M/s Champak Enterprises pvt Ltd. ಇವರಿಗೆ ಅಧಿಕೃತ ವಿತರಕರಾಗಿ ಪರವಾನಿಗೆಯನ್ನು ನೀಡಿರುತ್ತಾರೆ. ಮತ್ತು Single Source ಆಗಿರುತ್ತದೆ. ಪ್ರಸ್ತುತ ಕೋವಿಡ್-19 ಸೋಂಕಿನ ಕಾರಣದಿಂದಾಗಿ ಸಂಸ್ಥೆಗೆ ರೋಗಿಗಳ ಚಿಕಿತ್ಸೆಗೆ ವಾರ್ಷಿಕವಾಗಿ 1800 CG8+ ಮತ್ತು 3600 EG7+ Catridge ಗಳು ಅವಶ್ಯಕವಾಗಿದ್ದು, ಸದರಿಗಳ ಒಟ್ಟು ಅಂದಾಜು ವೆಚ್ಚವು ರೂ.24.00 ಲಕ್ಷಗಳಾಗಿರುವುದರಿಂದ ಸದರಿ ಅಧಿಕೃತ ವಿತರಕರಿಂದ ಅಗತ್ಯತೆಗೆ ಅನುಸಾರವಾಗಿ ಸರಬರಾಜು ಪಡೆಯಲು ಮತ್ತು ವೆಚ್ಚವನ್ನು ಯೂಸರ್ಸ್ ನಿಧಿಯಡಿ ಭರಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆ ಮತ್ತು ಸಂಸ್ಥೆಯ ಅಧೀನ ಸಂಸ್ಥೆಗಳ ಗಣಕಯಂತ್ರಗಳ ನಿರ್ವಾಹಣೆಗೆ ಅವಶ್ಯವಿರುವ Catridge refilling & Drum Replacement ಗಳ ಸರಬರಾಜಿಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆದು ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2210–05–105–149–103 ಅಡಿಯಲ್ಲಿ ಭರಿಸುವುದೆಂದು ಹಾಗೂ ಎಸ್.ಎನ್.ಸಿ.ಯು. ಮತ್ತು ಐ.ಸಿ.ಯು. ವಿಭಾಗದ ಎ.ಬಿ.ಜಿ. ಯಂತ್ರಗಳ ನಿರ್ವಹಣೆಗೆ ಅಗತ್ಯವಿರುವ CG8+ ಮತ್ತು EG7+ Catridgeಗಳು Single Source ಆಗಿರುವುದರಿಂದ ಮೂಲ ತಯಾರಿಕಾ ಸಂಸ್ಥೆಯ ಅಧಿಕೃತ ಸರಬರಾಜುದಾರರಾದ M/s Champak Enterprises pvt Ltd ಇವರಿಂದ ತಂತ್ರಜ್ಞರ ಸಮಿತಿಯಿಂದ ವರದಿ ಪಡೆದು ಅವಶ್ಯಕತೆಗೆ ಅನುಗುಣವಾಗಿ ಖರೀದಿಸಿ ಸದರಿ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 05

**ವಿಷಯ: ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ Covid-19 ರೋಗಿಗಳಿಗೆ ಚಿಕಿತ್ಸೆ ನೀಡಲು ಅತ್ಯವಶ್ಯಕವಿರುವ ಔಷಧಿಗಳು ಹಾಗೂ ಸೊಂಕು ತಡೆಗಟಲು ಅಗತ್ಯವಿರುವ Miscellaneous Itemಗಳನ್ನು ಸರಬರಾಜು ಪಡೆಯಲು ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಇ-ಟೆಂಡರ್ ಕರೆದಿರುವುದನ್ನು ಅನುಮೋದಿಸುವ ಬಗ್ಗೆ.**

ಉಲ್ಲೇಖ: ವೈದ್ಯಕೀಯ ಅಧೀಕ್ಷಕರು, ಹಿಮ್ಸ್ ಬೋಧಕ ಆಸ್ಪತ್ರೆ ಕಛೇರಿ ಪತ್ರ ಸಂಖ್ಯೆ:ಎಸ್‌ಸಿಹೆಚ್/ ಚಿಶ.ವೈಅ./25/20-21 ದಿನಾಂಕ: 13.8.2020.

*-*-*

ಪ್ರಸ್ತಾವನೆ:

ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯನ್ನು ಜಿಲ್ಲಾ ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗಿದ್ದು, ದಿನದಿಂದ ದಿನಕ್ಕೆ ಕೊರೊನಾ ವೈರಸ್ ಸೋಂಕಿತರು ಹಾಸನ ಜಿಲ್ಲೆಯಲ್ಲಿ ಹೆಚ್ಚುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಅವಶ್ಯವಿರುವ ಕೋವಿಡ್ ಔಷಧಿಗಳು (Tablets, Injections & Miscellaneous Items)ಗಳು ಪ್ರಸ್ತುತ ಟೆಂಡರ್‌ನಲ್ಲಿ ಸೇರ್ಪಡೆಯಾಗಿಲ್ಲದಿರುವುದರಿಂದ ತುರ್ತಾಗಿ ಸರಬರಾಜು ಮಾಡಿ ಪುರೈಸಿಕೊಡುವ ಬಗ್ಗೆ ವೈದ್ಯಕೀಯ ಅಧೀಕ್ಷಕರು, ಹಿಮ್ಸ್ ಬೋಧಕ ಆಸ್ಪತ್ರೆಯವರು ಬೇಡಿಕೆ ಪಟ್ಟಿಯ ಸಲ್ಲಿಸಿರುತ್ತಾರೆ.

ಹಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇದುವರೆಗೂ ಔಷಧಿ ಮತ್ತು ಇತರೆ ವಸ್ತುಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಕೆಲವು ಕೋವಿಡ್-19 ಚಿಕಿತ್ಸೆಗೆ ಸಂಬಂಧಿಸಿದ ಔಷಧಿಗಳು ಸೇರ್ಪಡೆಯಾಗಿಲ್ಲದಿರುವುದರಿಂದ ಈ ಔಷಧಿಗಳು ಚಿಕಿತ್ಸೆಗಾಗಿ ತುರ್ತು ಅಗತ್ಯವಿರುವುದರಿಂದ ಹಾಗೂ ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗವು ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚಾಗುತ್ತಿದ್ದು ಇದರ ನಿರ್ವಹಣೆಗೆ ಅತೀ ಅವಶ್ಯಕವಾಗಿ ಬೇಕಾಗಿರುವ ಔಷಧಿಗಳನ್ನು ಮತ್ತು ಇತರೆ ವಸ್ತುಗಳನ್ನು ಈ ಕೆಳಕಂಡ ಪಟ್ಟಿಯಂತೆ ಸರಬರಾಜು ಪಡೆಯಲು ತುರ್ತಾಗಿ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಿ ಸರಬರಾಜು ಮಾಡಿಕೊಡುವಂತೆ ಕೋರಿರುತ್ತಾರೆ ವಿವರ ಕೆಳಕಂಡಂತಿರುತ್ತದೆ.

| Sl. No. | Particulars | Quantity | Total Amount In Rs. |
|---|---|---|---|
| 1 | Covid – 19 - Tablets, Injections, Syrups, Miscellaneous Items | As per List enclosed | 36 Lakhs |

ಆದುದರಿಂದ ಕೋವಿಡ್-19 ಚಿಕಿತ್ಸೆಗಾಗಿ ಅವಶ್ಯಕವಾಗಿ ಬೇಕಾಗಿರುವ ಔಷಧಿಗಳನ್ನು ಖರೀದಿಸಲು ಅಲ್ಪಾವಧಿ ಇ-ಟೆಂಡರ್‌ನ್ನು (10 ದಿವಸಗಳಿಗೆ ಮೀರದಂತೆ) ಸಂಸ್ಥೆಯ ಆಡಳಿತ ಮಂಡಳಿ ಮತ್ತು ಆರ್ಥಿಕ ಸಮಿತಿ ಸಭೆಯ ಘಟನೋತ್ತರ ಅನುಮೋದನೆಯ ನಿರೀಕ್ಷೆಯ ಮೇರೆಗೆ ರೂ.36.00 ಲಕ್ಷಗಳ ಮೊತ್ತದ

ಔಷಧಿ ಖರೀದಿಸಲು ಅಲ್ಪಾವಧಿ ಇ-ಟೆಂಡರ್‌ನ್ನು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು, ಇವರಿಂದ ಏಕ ಕಡತದಲ್ಲಿ ಅನುಮೋದನೆ ಪಡೆದು ದಿನಾಂಕ:18.08.2020ರಂದು ಇ-ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಮುಂದುವರೆದು ಆರ್ಥಿಕ ಸಮಿತಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಇ-ಟೆಂಡರ್ ಕರೆದಿರುವುದನ್ನು ಮತ್ತು ಸದರಿ ವೆಚ್ಚವನ್ನು ಆಸ್ಪತ್ರೆ ನಿರ್ವಹಣಾ ಅನುದಾನದಿಂದ ಅಥವಾ ಯುಸ್ಸರ್ ನಿಧಿಯಿಂದ ಭರಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

<u>ತೀರ್ಮಾನ:</u>

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ. ಸಂಸ್ಥೆಯ ಆಡಳಿತ ಮಂಡಳಿ ಸಭೆ ಮತ್ತು ಆರ್ಥಿಕ ಸಮಿತಿ ಸಭೆಯ ಘಟನ್ನೋತರ ಅನುಮೋದನೆಯ ನಿರೀಕ್ಷೆಯ ಮೇರೆಗೆ ಕೋವಿಡ್ -19 ಚಿಕಿತ್ಸೆಗೆ ಅವಶ್ಯಕವಿರುವ ರೂ.36.00 ಲಕ್ಷಗಳ ವೆಚ್ಚದಲ್ಲಿ ಔಷಧಿಗಳನ್ನು ಅಲ್ಪಾವಧಿ ಇ-ಟೆಂಡರ್ ಮೂಲಕ ಖರೀದಿಸಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ. ಇವರು ಅನುಮೋದನೆ ನೀಡಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು ಹಾಗೂ ಸದರಿ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಆಸ್ಪತ್ರೆ ನಿರ್ವಹಣಾ ಅನುದಾನದಿಂದ ಅಥವಾ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 06

ವಿಷಯ: ಹಿಮ್ಸ್ ಸಂಸ್ಥೆಯ ಆವರಣದಲ್ಲಿರುವ ನಕ್ಷತ್ರ ಮಾದರಿಯ ಶುಶ್ರೂಷಕ ವಸತಿ ನಿಲಯದ ಮೇಲ್ಛಾವಣಿಯಿಂದ ನೀರು ಸೋರದಂತೆ ವಾಟರ್ ಪ್ರೂಫಿಂಗ್ ಟ್ರೀಟ್ಮೆಂಟ್ ಅಳವಡಿಸುವುದು ಮತ್ತು ಯು.ಜಿ.ಡಿ. ಪೈಪ್ ಲೈನ್ ಅಳವಡಿಸುವುದು ಹಾಗೂ ಹಳೆಯ ಹಾಗೂ ಹೊಸ ಬೋಧಕ ಆಸ್ಪತ್ರೆಯ ಮಧ್ಯ ಹೈಮಾಸ್ಟ್ ದೀಪವನ್ನು ಅಳವಡಿಸುವುದು, ಹೊಸ ಆಸ್ಪತ್ರೆಯ ಪಕ್ಕದಲ್ಲಿರುವ ಹಳೆ ವಿದ್ಯುತ್ ಕಂಬಗಳನ್ನುತೆರವುಗೊಳಿಸುವ ಕಾಮಗಾರಿಗಳನ್ನು ತುರ್ತು ಅವಶ್ಯಕತೆಗೆ ಅನುಗುಣವಾಗಿ ಕೈಗೊಂಡಿರುವುದನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ: 1) ನಕ್ಷತ್ರ ಮಾದರಿಯ ವಸತಿ ನಿಲಯದಲ್ಲಿ ವಾಸಿಸುತ್ತಿರುವ ಶುಶ್ರೂಷಕರ ಮನವಿ ಪತ್ರ ದಿನಾಂಕ:27.05.2020.

2) ಹಿಮ್ಸ್ ಬೋಧಕರ ಸಂಘ, ಹಿಮ್ಸ್‌ಸ್ತಾ, ರವರ ಮನವಿ ಪತ್ರ ದಿನಾಂಕ:7.06.2019.

*—*—*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿರುವ ನಕ್ಷತ್ರ ಮಾದರಿಯ ಶುಶ್ರೂಷಕರ ವಸತಿ ನಿಲಯ ಕಟ್ಟಡ ನಿರ್ಮಾಣವಾಗಿ ಸುಮಾರು 20 ವರ್ಷಗಳಾಗಿದ್ದು, ಸದರಿ ವಸತಿ ನಿಲಯದಲ್ಲಿ ವಾರ್ಷಿಕ ನಿರ್ವಹಣೆ ಇಲ್ಲದೆ ಯು.ಜಿ.ಡಿ. ಪೈಪ್‌ಗಳು ಬ್ಲಾಕ್ ಆಗಿರುವುದು, ಮೇಲ್ಛಾವಣಿ ದುರಸ್ತಿ, ವಿದ್ಯುತ್ ಲೈನ್‌ಗಳ ದುರಸ್ತಿ, ನೀರು ಸರಬರಾಜು ಪೈಪುಗಳ ರಿಪೇರಿ, ಬಾಗಿಲುಗಳು ಮತ್ತು ಕಿಟಕಿಗಳ ರಿಪೇರಿ,ವಸತಿ ನಿಲಯಗಳಿಗೆ ಬಣ್ಣ ಬಳಿಯುವುದು ಇತ್ಯಾದಿ ದುರಸ್ತಿಗಳಾಗಬೇಕಾಗಿದ್ದು, ದುರಸ್ತಿಯಿಲ್ಲದೆ ಈ ಕಟ್ಟಡದಲ್ಲಿ ವಾಸಿಸಲು ತುಂಬಾ ತೊಂದರೆಯಾಗಿರುವುದಾಗಿ ಸದರಿ ಸಮಸ್ಯೆಗಳನ್ನು ತುರ್ತಾಗಿ ಬಗೆಹರಿಸಿಕೊಡಬೇಕಾಗಿ ಉಲ್ಲೇಖಿತ ಪತ್ರ (1) ರಲ್ಲಿ ಮನವಿ ಸಲ್ಲಿಸಿರುತ್ತಾರೆ. ಹಾಗೂ ಉಲ್ಲೇಖಿತ ಪತ್ರ (2) ರಲ್ಲಿ ರಾತ್ರಿ ಪಾಳಯದಲ್ಲಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಕೆಲಸ ನಿರ್ವಹಿಸಲು ಹಾಗೂ ಆಸ್ಪತ್ರೆಯ ರೋಗಿಗಳ ಭದ್ರತೆಯ ಹಿತದೃಷ್ಟಿಯಿಂದ ಹಳೆ ಮತ್ತು ಹೊಸ ಆಸ್ಪತ್ರೆಯ ಕಟ್ಟಡದ ಮಧ್ಯ ಹೈಮಾಸ್ಟ್ ದೀಪನ್ನು ಅಳವಡಿಸಿಕೊಡುವಂತೆ HIMSSTA ರವರು ಮನವಿ ಸಲ್ಲಿಸಿದ್ದರು.

ಸದರಿಯವರ ಮನವಿಗೆ ಅನುಗುಣವಾಗಿ ಕಾರ್ಯಾಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ–ವಿಭಾಗ, ಹಾಸನ ರವರಿಂದ ಅಂದಾಜು ಪಟ್ಟಿ ಪಡೆದು ತುರ್ತು ಅವಶ್ಯಕತೆ ಇದ್ದುದರಿಂದ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

**ಕಾಮಗಾರಿಗಳ ಮತ್ತು ಅಂದಾಜು ಪಟ್ಟಿಯ ವಿವರಗಳು ಈ ಕೆಳಕಂಡಂತಿರುತ್ತದೆ.**

| ಕ್ರ. ಸಂ. | ಕಾಮಗಾರಿಯ ವಿವರ | ಅಂದಾಜು ಮೊತ್ತ |
|---|---|---|
| 1 | ಹಿಮ್ಸ್ ಸಂಸ್ಥೆಯ ಶುಶ್ರೂಷಕ ವಸತಿ ನಿಲಯದ ಮೇಲ್ಛಾವಣಿಯ Dismantling of existing damaged WPC course & disposing the stuff., Providing M20 PCC to line & level along with water proofing compound , Providing finishing with plastering with corner covings ಇತ್ಯಾಧಿಗಳನ್ನು ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಕೈಗೊಳ್ಳುವ ಬಗ್ಗೆ. | **4,98,000/-** |

| | | |
|---|---|---|
| 2 | ಶುಶ್ರೂಷಕ ವಸತಿ ನಿಲಯದ ಯು.ಜಿ.ಡಿ.ಪೈಪ್ ಲೈನ್ ರಿಪೇರಿ ಕಾಮಗಾರಿಗಳನ್ನು ಕೈಗೊಳ್ಳುವುದು | 9,97,000/- |
| 3 | ಹಿಮ್ಸ್ ಸಂಸ್ಥೆಯ ಹಳೆಯ ಹಾಗೂ ಹೊಸ ಬೋಧಕ ಆಸ್ಪತ್ರೆಯ ಮಧ್ಯ ಹೈ ಮಾಸ್ಟ್ ದೀಪವನ್ನು ಅಳವಡಿಸುವುದು ಮತ್ತು ಹೊಸ ಆಸ್ಪತ್ರೆಯ ಪಕ್ಕದಲ್ಲಿರುವ ಹಳೆ ವಿದ್ಯುತ್ ಕಂಬಗಳನ್ನು ತೆರವುಗೊಳಿಸುವ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ. | 4,65,000/- |

ಮೇಲ್ಕಂಡ ಕಾಮಗಾರಿಗಳು ತುರ್ತಾದ ಕಾಮಗಾರಿಗಳಾಗಿದ್ದುದರಿಂದ ಆರ್ಥಿಕ ಸಮಿತಿಯ ಘಟನೋತ್ತರ ಮಂಜೂರಾತಿಯ ನಿರೀಕ್ಷಣೆಯ ಮೇರೆಗೆ ಕ್ರಮ ಸಂಖ್ಯೆ (1) ಮತ್ತು (2) ರ ಕಾಮಗಾರಿಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ–ವಿಭಾಗ, ಹಾಸನ ರವರಿಂದ ಮತ್ತು ಕ್ರಮ ಸಂಖ್ಯೆ (3) ರ ಕಾಮಗಾರಿಯನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ಇವರಿಂದ ಕೈಗೊಳ್ಳಲಾಗಿರುತ್ತದೆ.

ಮುಂದುವರಿದು ಕ್ರಮ ಸಂಖ್ಯೆ (1) ಮತ್ತು (2) ರ ಕಾಮಗಾರಿಯ ನಿರ್ವಹಣೆಯ ವೆಚ್ಚವನ್ನು ಸಿಬ್ಬಂದಿಗಳ ವೇತನದಿಂದ ಕಟಾವು ಮಾಡಿದ ಮನೆ ಬಾಡಿಗೆ ಭತ್ಯೆಯನ್ನು ಅಪಾರ್ಟ್‌ಮೆಂಟ್ ಖಾತೆಗೆ ವರ್ಗಾಹಿಸಲಾಗಿರುವ ಮೊತ್ತದಿಂದ ಭರಿಸಲು ಮತ್ತು ಕ್ರಮ ಸಂಖ್ಯೆ (3) ರ ಕಾಮಗಾರಿಯ ನಿರ್ವಹಣೆ ವೆಚ್ಚವನ್ನು ಯೂಜರ್ಸ್ ನಿಧಿಯಿಂದ ಭರಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

<u>ತೀರ್ಮಾನ:</u>

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸದರಿ ಕಟ್ಟಡಗಳು ನಿರ್ವಹಣೆ ಇಲ್ಲದೆ ದುರಸ್ಥಿಗೆ ಬಂದಿರುವುದರಿಂದ ಹಾಗೂ ತುರ್ತು ಅವಶ್ಯಕತೆ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸಲಾಯಿತು. ಕ್ರಮ ಸಂಖ್ಯೆ (1) ಮತ್ತು (2)ರ ಕಾಮಗಾರಿ ನಿರ್ವಹಣಾ ವೆಚ್ಚವನ್ನು ಸಿಬ್ಬಂದಿಗಳ ವೇತನದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಕಟಾವು ಮಾಡಿ ಅಪಾರ್ಟ್‌ಮೆಂಟ್ ನಿರ್ವಾಹಣಾ ಖಾತೆಗೆ ವರ್ಗಾಹಿಸಲಾಗಿರುವ ಮೊತ್ತದಿಂದ ಭರಿಸಲು ಹಾಗೂ ಕ್ರಮ ಸಂಖ್ಯೆ: (3)ರ ಕಾಮಗಾರಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 07

**ವಿಷಯ: ಕ್ಯಾನ್ಸರ್ ವಿಭಾಗವನ್ನು ಮೇಲ್ದರ್ಜೆಗೇರಿಸುವ ಯೋಜನೆ ಸಂಬಂಧ ಹೊಸ ಹುದ್ದೆಗಳ ಸೃಜಿಸುವ ಕುರಿತು.**

*-*-*

**ಪ್ರಸ್ತಾವನೆ:**

ಹಿಮ್ಸ್ ಬೋಧಕ ಆಸ್ಪತ್ರೆಯ ಕ್ಯಾನ್ಸರ್ ಕೇಂದ್ರವು ತನ್ನ ರೇಡಿಯೋಥೆರಪಿ ವಿಭಾಗದಿಂದ ಕಳೆದ 2013 ಮೇ ತಿಂಗಳಿನಿಂದ ಸತತವಾಗಿ ದಿನಕ್ಕೆ 30ಕ್ಕೂ ಹೆಚ್ಚು ಕ್ಯಾನ್ಸರ್ ರೋಗಿಗಳಿಗೆ ರೇಡಿಯೋಥೆರಪಿ ಚಿಕಿತ್ಸೆಯನ್ನು ನೀಡುತ್ತಾ ಇದೆ. ಇದು ಈ ಹಿಂದೆ AERB(Atomic Energy Regulatory Board) ವತಿಯಿಂದ ಸ್ಥಾಪಿತವಾದ Bhabhatron–II ಎಂಬ ಟೆಲಿಕೋಬಾಲ್ಟ್ ಮೆಷಿನ್‌ನಿಂದ ಸಾಧ್ಯವಾಗುತ್ತಿದೆ. ಆದರೆ, ಇದೇ ಚಿಕಿತ್ಸೆಗೆ ಇತ್ತೀಚೆಗೆ ಇನ್ನೂ ಹೆಚ್ಚು ಗುಣಮಟ್ಟದ ಹಾಗೂ ಆವಿಷ್ಕಾರದಿಂದ ಒಡಗೂಡಿದ Linear Accelerator ಹಾಗೂ Brachytherapy ನನ್ನು ಅಳವಡಿಸಿಲು ರಾಜ್ಯ ಸರ್ಕಾರದಿಂದ ಅನುಮತಿ ಪಡೆದು ಆ ಮೆಷಿನ್‌ಗಳು ಹಾಗೂ ಅದಕ್ಕೆ ಬೇಕಾಗುವ ಬಂಕರ್ ಹಾಗೂ ಕಟ್ಟಡಗಳಿಗಾಗಿ ರೂ.18.25ಕೋಟಿಗಳ ಅನುದಾನಕ್ಕೆ ಅನುಮೋದನೆಯನ್ನು ಸಂಸ್ಥೆಯಿಂದ ಪಡೆಯಲಾಗಿರುತ್ತದೆ. ಇದೇ ಕಟ್ಟಡದ ನೀಲಿನಕ್ಷೆಗೆ AERB ಮುಂಬೈ, ಕೇಂದ್ರ ಸರ್ಕಾರ ಇವರಿಂದ ಕೂಡ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

AERB, ಮುಂಬೈ, ಕೇಂದ್ರ ಸರ್ಕಾರವು ತನ್ನ ನಿರ್ದೇಶನದಲ್ಲಿ ಮೇಲೆ ಸೂಚಿಸಿದ ಯಂತ್ರಗಳನ್ನು ಖರೀದಿಸುವ ಮುನ್ನ ಆ ಯಂತ್ರಗಳ ನಿರ್ವಹಣೆಗೆ ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಈ ವಿಭಾಗದಲ್ಲಿ ಸೃಷ್ಟಿಯಾಗಿದ್ದರಷ್ಟೇ, ಯಂತ್ರಗಳ ಖರೀದಿಗೆ ಒಪ್ಪಿಗೆ ನೀಡಲಾಗುವುದಾಗಿ ಎಂದು AERB ಮುಂಬೈರವರು ತಿಳಿಸಿರುತ್ತಾರೆ. ಹಾಗೂ ಕಿದ್ವಾಯಿ ಸಂಸ್ಥೆಯ ತಾಂತ್ರಿಕ ತಂಡ ಹಾಗೂ ನಿರ್ದೇಶಕರಿಂದಲೂ ಇದಕ್ಕೆ ಅನುಮೋದನೆ ದೊರಕಿದೆ. ಈ ನಿಟ್ಟಿನಲ್ಲಿ ಈ ಕೆಳಕಂಡ ರೇಡಿಯೋಥೆರಪಿ ವಿಭಾಗದ ನೂತನ ಹುದ್ದೆಗಳ ಸೃಜನೆಗಾಗಿ, ಆಯಾ ಹುದ್ದೆಗಳ ವೇತನ ಶ್ರೇಣಿಯೊಂದಿಗೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವ ನಿಟ್ಟಿನಲ್ಲಿ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗಿರುತ್ತದೆ.

ಸರ್ಕಾರದಿಂದ ಅನುಮೋದನೆಯಾದ ನಂತರ AERB ಮುಂಬೈಯವರು ಸಮ್ಮತಿಯೊಂದಿಗೆ ನೂತನ ಮೆಷಿನ್‌ಗಳ ಖರೀದಿಗೆ ವ್ಯವಸ್ಥೆ ಮಾಡಬೇಕಾಗಿರುತ್ತದೆಂಬ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| Sl.No. | Name of the Post | Number of Post | Pay Scale |
|---|---|---|---|
| 1 | Assistant Professor (Radiation Oncology) | 03 | 79800-211500 |
| 2 | Assistant Professor ( Radiation Physics) | 02 | 79800-211500 |
| 3 | Radiotherapy Technologists | 04 | 27650-52650 |
| | **Total** | **09** | |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಇನ್ನೂ ಹೆಚ್ಚಿನ ವಿವರಗಳೊಂದಿಗೆ ಮುಂದಿನ ಆರ್ಥಿಕ ಸಮಿತಿ ಸಭೆಗೆ ಮಂಡಿಸುವಂತೆ ಸೂಚಿಸಿ ಸದರಿ ವಿಷಯವನು ಮೂಂದೂಡಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 08

ವಿಷಯ: ಸಂಸ್ಥೆಯ ಮಿಣಿಜೀವ ಶಾಸ್ತ್ರ ವಿಭಾಗದಲ್ಲಿ **Blood culture** ಪರೀಕ್ಷೆಗಳನ್ನು **Automated Blood culture System**ನಲ್ಲಿ ಮಾಡುವ ಬಗ್ಗೆ ಅಗತ್ಯವಿರುವ ವೈದ್ಯಕೀಯ ಉಪಕರಣವನ್ನು **Buyback** ಮೂಲಕ ಸರಬರಾಜು ಪಡೆಯುವ ಬಗ್ಗೆ.

ಉಲ್ಲೇಖ: ವಿಭಾಗದ ಮುಖ್ಯಸ್ಥರ ಮನವಿ ಸಂಖ್ಯೆ:ಹಿಮ್ಸ್/ಮಿಣೀ/35/2020-21, ದಿನಾಂಕ:25.08.2020.

*-*-*

**ಪ್ರಸ್ತಾವನೆ:**

ಮಿಣಿಜೀವಿಶಾಸ್ತ್ರ ವಿಭಾಗದಲ್ಲಿ Automated Blood Culture ಯಂತ್ರದ ಅವಶ್ಯಕತೆ ಬಹಳಷ್ಟಿದ್ದು, NICU ಮತ್ತು Cancer ವಿಭಾಗಗಳ ತಜ್ಞರು ತಿಂಗಳಿಗೆ "250-300 Blood Culture ಪರೀಕ್ಷೆಗಳನ್ನು Automated Blood Culture System''ನಲ್ಲಿ ಮಾಡಿಸಬೇಕೆಂದು ಬೇಡಿಕೆಯನ್ನು ಮುಂದಿಟ್ಟಿರುತ್ತಾರೆ. ಪ್ರಸ್ತುತ Conventional Blood Culture ನಲ್ಲಿ ರಿಪೋರ್ಟ್‌ನ್ನು ಕೊಡಲು 7 ರಿಂದ 10 ದಿನಗಳ ವರೆಗೆ ಕಾಯಬೇಕಾಗುತ್ತದೆ. ಹಾಗೂ ರೋಗಿಗಳು Antibiotic ತೆಗೆದುಕೊಂಡಿದ್ದರೆ ಅಥವಾ ರಕ್ತದ ಮಾದರಿಯ Volume ಕಡಿಮೆ ಇದ್ದರೇ ರಿಪೋರ್ಟ್‌ಗಳು ಸರಿಯಾಗಿ ಬರುವುದಿಲ್ಲ. Automated Blood Culture Systemನ್ನು ಉಪಯೋಗಿಸುವುದರಿಂದ ಮೇಲೆ ತಿಳಿಸಿದ ಅಡಚಣೆಗಳನ್ನು ಹೋಗಲಾಡಿಸಬಹುದಾಗಿರುತ್ತದೆ.

ಮಿಣಿಜೀವಿಶಾಸ್ತ್ರ ವಿಭಾಗದಲ್ಲಿ "BD Bactec'' ಎಂಬ "Automated Blood Culture System''ಇದ್ದು, ಸದರಿ ಉಪಕರಣವು ಕಾರ್ಯ ನಿರ್ವಹಿಸುತ್ತಿಲ್ಲ. ಉಪಕರಣವನ್ನು ಪರಿಶೀಲಿಸಿದ Service Engineer ರವರು, Systemನ CPU ಕಾರ್ಯ ನಿರ್ವಹಿಸುತ್ತಿಲ್ಲ ಸದರಿ ಯಂತ್ರದಲ್ಲಿ ಬೇರೆ ಯಾವುದೇ ರೀತಿಯ ತೊಂದರೆಗಳಿವೆಯೇ ಎಂದು ಪರೀಕ್ಷಿಸಲು CPU ನ್ನು ಬದಲಾಯಿಸಿ Upgrade ಮಾಡಿದ ನಂತರವೇ ತಿಳಿಯಬಹುದೆಂದು ತಿಳಿಸಿರುತ್ತಾರೆ.

BD Company ಯಿಂದ CPUನ್ನು Upgrade ಮಾಡಿ ಬದಲಾಯಿಸಲು ಸುಮಾರು ರೂ.8,00,000/-ಗಳ Quatation ನೀಡಿದ್ದು, 8,00,000ರೂಗಳನ್ನು ಖರ್ಚು ಮಾಡಿ CPU ಬದಲಾಯಿಸಿದ ನಂತರವೇ, ಸದರಿ ಉಪಕರಣವು ಕೆಲಸ ಮಾಡುತ್ತದೆಯೋ ಇಲ್ಲವೋ ಎಂಬುದು ತಿಳಿಯಬುದಾಗಿರುತ್ತದೆ. ಅದಲ್ಲದೆ ಸದರಿ ಉಪಕರಣವು ತುಂಬಾ ಹಳೆಯ Model ಆಗಿರುವುದರಿಂದ, ಮುಂದೆ Service ಗೆ ಬೇಕಾದ ಬಿಡಿ ಭಾಗಗಳು ಸಮಯಕ್ಕೆ ಸರಿಯಾಗಿ ಸಿಗುವುದು ಕಷ್ಟವಾಗಬಹುದು ಎಂದು Service Engineer ಹೇಳಿರುತ್ತಾರೆ. ಹೀಗಿರುವುದರಿಂದ ಈ ಹಳೆಯ ಯಂತ್ರವನ್ನು ರಿಪೇರಿ ಮಾಡಿಸಿ ಉಪಯೋಗಿಸುವುದರಿಂದ, ಅನುಕೂಲಕ್ಕಿಂತ ಅನಾನುಕೂಲತೆಯೇ ಹೆಚ್ಚು ಇರುವುದರಿಂದ ಕೋವಿಡ್-19ನ ಐ.ಸಿ.ಯು ನಲ್ಲಿರುವ ರೋಗಿಗಳ ಚಿಕಿತ್ಸೆಗಳಿಗೆ ಸಂಬಂಧಿಸದಂತೆ Automated Blood

Culture ಪರೀಕ್ಷೆಯ ಮಾಡಲು ಈ ವ್ಯವಸ್ಥೆಯನ್ನು ಅಳವಡಿಸಿಕೊಡಬೇಕೆಂದು ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಸಹ ಕೋರಿರುತ್ತಾರೆ.

ಮುಂದುವರೆದು BD ಕಂಪನಿಯವರು 40 ಬಾಟಲ್‌ಗಳ ಯಂತ್ರಕ್ಕೆ ರೂ.8,30,000/-ಗಳ ಅಂದಾಜು ವೆಚ್ಚವಾಗಲಿದ್ದು, ಹಳೆಯ ಉಪಕರಣವನ್ನು ರೂ.4,10,000/-ಗಳಿಗೆ Buy Back ಮೂಲಕ ವಿಲೇವಾರಿ ಮಾಡಿಕೊಂಡು .4,20,000/- ರೂಗಳನ್ನು ಪಾವತಿಸಿದಲ್ಲಿ ಹೊಸ BACTEC 9120 ಉಪಕರಣವನ್ನು ನೀಡುವುದಾಗಿ BD ಕಂಪನಿಯವರು ತಿಳಿಸಿರುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

<u>ತೀರ್ಮಾನ:</u>

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸದರಿ ಉಪಕರಣದ ಮೌಲ್ಯ, Buy Back ಮಾಡುತ್ತಿರುವ ಮೌಲ್ಯ, ಉಪಕರಣದ ಉಪಯುಕ್ತತೆಯ ಬಗ್ಗೆ ಸಂಸ್ಥೆಯ ಹಂತದಲ್ಲಿ ಪರಿಣಿತ ತಜ್ಞರು ಮತ್ತು ಬಯೋಮೆಡಿಕಲ್ ಇಂಜಿನಿಯರ್ ಒಳಗೊಂಡ ಸಮಿತಿ ರಚಿಸಿ ಸಾಧಕ ಭಾಧಕಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಂಡು ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸುವಂತೆ ಸೂಚಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 09

**ವಿಷಯ: ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ಕೋವಿಡ್-19 ಮತ್ತು ಕೋವಿಡ್‌ಯೇತರ ರೋಗಿಗಳಿಗೆ ಚಿಕಿತ್ಸೆ ನೀಡಲು ಅತ್ಯಾವಶ್ಯಕವಿರುವ ಔಷಧಿಗಳು, Surgical, Non Surgical, Suture Materials, ಕೆಮಿಕಲ್ಸ್, Reagent Kits, Glasswares, Disc Itemsಗಳಿಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಮರು ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸುವ ಬಗ್ಗೆ.**

ಉಲ್ಲೇಖ: 1) ವೈದ್ಯಕೀಯ ಅಧೀಕ್ಷಕರು, ಹಿಮ್ಸ್ ಬೋಧಕ ಆಸ್ಪತ್ರೆ ಕಛೇರಿ ಪತ್ರ ಸಂಖ್ಯೆ:ಎಸ್‌ಸಿಹೆಚ್/ಚಿಶ.ವೈಅ./25/20-21 ದಿನಾಂಕ: 13.8.2020.ಮತ್ತು ರೇಡಿಯಾಲಜಿ ವಿಭಾಗದ ಮುಖ್ಯಸ್ಥರ ಮನವಿ, ದಿನಾಂಕ:31.08.2020

2) 27ನೇ ಖರೀದಿ ಸಮಿತಿ ಸಭೆ ದಿನಾಂಕ:25.08.2020.

*-*-*

**ಪ್ರಸ್ತಾವನೆ:**

ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳಿಗೆ ಚಿಕಿತ್ಸೆ ನೀಡಲು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಅನ್ವಯ 2020-21ನೇ ಸಾಲಿಗೆ ಅವಶ್ಯವಿರುವ ಔಷಧಿಗಳು, Surgical, Non Surgical, Suture Materials, ಕೆಮಿಕಲ್ಸ್, Reagent Kits, Glasswares, Disc ಮತ್ತು ಇತರೆ ವಸ್ತುಗಳಿಗೆ ಇ-ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಅನುಮೋದನೆಗಾಗಿ ಮಾನ್ಯ ನಿರ್ದೇಶಕರು, ವೈದ್ಯಕೀಯ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹಾಗೂ ಅಧ್ಯಕ್ಷರು ಖರೀದಿ ಸಮಿತಿ ಹಿಮ್ಸ್ ಹಾಸನ ಇವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ, ದಿನಾಂಕ:25.08.2020 ರಂದು ನಡೆದ 27ನೇ ಖರೀದಿ ಸಮಿತಿ ಸಭೆಯಲ್ಲಿ ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರುರವರು, ಕೋವಿಡ್-19ಗೆ ಅವಶ್ಯಕವಿರುವ ಐಟಂಗಳು ಮತ್ತು ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯವಿರುವ ಐಟಂಗಳು Single Bid ಮತ್ತು Unbid ಐಟಂಗಳಾಗಿರುವುದರಿಂದ ಅಲ್ಪಾವಧಿ ಮರುಟೆಂಡರ್ ಆಹ್ವಾನಿಸಿ ಸರಬರಾಜು ಪಡೆಯಲು ಸೂಚಿಸಿರುತ್ತಾರೆ.

| Sl. No. | Particulars | Single Bid Items | No Bid Items |
|---|---|---|---|
| 1 | Tablet & Injections | 33 nos | 23 nos |
| 2 | Surgical & Non Surgical Items | 65 nos. | 28 nos. |
| 3 | Chemicals, Reagent Kits, Glasswares, Disc | 191 nos. | 35 nos. |
| 4 | VRDI – Reagent Kits, Plasticwares, Consuambles | 25 nos. | 26 nos. |

ಮುಂದುವರೆದು ಹಿಮ್ಸ್ ಬೋಧಕ ಆಸ್ಪತ್ರೆಯನ್ನು ಜಿಲ್ಲಾ ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗಿದ್ದು, ದಿನದಿಂದ ದಿನಕ್ಕೆ ಕೊರೊನಾ ವೈರಸ್ ಸೋಂಕಿತರು ಹಾಸನ ಜಿಲ್ಲೆಯಲ್ಲಿ ಹೆಚ್ಚುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಕೋವಿಡ್-19 ರೋಗಿಗಳ ಚಿಕಿತ್ಸೆಗಾಗಿ ಅವಶ್ಯವಿರುವ Single Bid ಆಗಿರುವ ಮತ್ತು Unbid items ಆಗಿರುವ Tablets, Injections & Miscellaneous Items, Chemicals, Reagent Kits, Glasswares, Discಗಳನ್ನು ಮತ್ತು ರೇಡಿಯಾಲಜಿ ವಿಭಾಗದಲ್ಲಿ ಕೋವಿಡ್-19 ಚಿಕಿತ್ಸೆಗೆ ಅಗತ್ಯವಿರುವ ಸಿ.ಆರ್ ಮತ್ತು ಸಿಟಿ & ಎಂಆರ್ಐ ಫಿಲಂಗಳನ್ನು ಒದಗಿಸಲು ವಿಭಾಗದ ಮುಖ್ಯಸ್ಥರು ಬೇಡಿಕೆಯನ್ನು ಸಲ್ಲಿಸಿರುತ್ತಾರೆ. ಇದರಲ್ಲಿ ಕೋವಿಡ್-19 ಚಿಕಿತ್ಸೆಗೆ ಮತ್ತು ಇತರೆ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯವಿರುವ ಐಟಂಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಮರು-ಟೆಂಡರ್ ಆಹ್ವಾನಿಸಿ ಸರಬರಾಜು ಪಡೆಯಲು ಹಾಗೂ ಸದರಿ ವೆಚ್ಚವನ್ನು ಆಸ್ಪತ್ರೆ ನಿರ್ವಹಣಾ ಅನುದಾನದಿಂದ ಭರಿಸುವುದರ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

<u>ತೀರ್ಮಾನ:</u>

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 27ನೇ ಖರೀದಿ ಸಮಿತಿ ಸಭೆಯಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರುರವರು ಸೂಚಿಸಿರುವಂತೆ ಮೇಲ್ಕಂಡ ಔಷಧಿಗಳನ್ನು ಸರಬರಾಜು ಪಡೆಯಲು ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಮರು-ಟೆಂಡರ್ ಕರೆಯುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 10

**ವಿಷಯ: ಸಂಸ್ಥೆಯ ಅವಶ್ಯಕತೆಗೆ ಅನುಗುಣವಾಗಿ ಅಗತ್ಯವಿರುವ ಒಬ್ಬರು ಸಹಾಯಕ ಅಭಿಯಂತರರು ಮತ್ತು ಎರಡು ಕಿರಿಯ ಅಭಿಯಂತರರ (Civil and Electrical) ಸೇವೆಗಳನ್ನು Consultancy ಆಧಾರದ ಮೇಲೆ ಪಡೆದುಕೊಳ್ಳುವ ಬಗ್ಗೆ.**

*—*—*

**ಪ್ರಸ್ತಾವನೆ:**

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳಲ್ಲಿನ ಸಮಸ್ಯೆಗಳ ಕುರಿತು ಚರ್ಚಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:25-02-2020ರಂದು ಪೂರ್ವಾಹ್ನ:10.00 ಗಂಟೆಗೆ ಜರುಗಿದ ಸಭೆಯ ಸಭಾ ನಡವಳಿಗಳ ಕಾರ್ಯಸೂಚಿ (3)ರ ನಿರ್ಣಯದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಸಂಸ್ಥೆಯ ಅವಶ್ಯಕತೆಗೆ ಅನುಗುಣವಾಗಿ ಅಗತ್ಯವಿರುವ ಒಬ್ಬರು ಸಹಾಯಕ ಅಭಿಯಂತರರು ಮತ್ತು ಎರಡು ಕಿರಿಯ ಅಭಿಯಂತರರ (Civil and Electrical) ಸೇವೆಗಳನ್ನು Consultancy ಆಧಾರದ ಮೇಲೆ ಪಡೆದುಕೊಳ್ಳುವ ಬಗ್ಗೆ ಆಯಾ ಸಂಸ್ಥೆಯ ಆರ್ಥಿಕ ಮತ್ತು ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ಕ್ರಮ ಜರುಗಿಸುವುದೆಂದು ತೀರ್ಮಾನಿಸಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ:ಎಂಇಡಿ67 ಎಂಎಸ್ಎಫ್ 2019 (ಭಾಗ-02), ದಿನಾಂಕ:16-03-2020ರ ಆದೇಶದಲ್ಲಿ ಸಂಬಂಧಪಟ್ಟ ಎಲ್ಲಾ ವೈದ್ಯಕೀಯ ಕಾಲೇಜುಗಳು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಪರಿಶೀಲಿಸಿ ಮೇಲ್ಕಂಡ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುತ್ತಾರೆ. ಮುಂದುವರಿದು ಸಂಸ್ಥೆಗೆ ಈ ಹುದ್ದೆಗಳು ಮಂಜೂರು ಆಗಿರುವುದಿಲ್ಲ ಆದರೆ ಈಗಾಗಲೇ ಈ ಸಂಸ್ಥೆಯ ಅಧೀನ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಬೋಧಕ ಅಸ್ಪತ್ರೆಯ ಮಂಜೂರಾದ ಹುದ್ದೆಗಳಲ್ಲಿ ಇಂಜಿನಿಯರ್ ಗ್ರೇಡ್2-01 & ಇಂಜಿನಿಯರ್ ಗ್ರೇಡ್3-01 ಹುದ್ದೆಗಳು ಖಾಲಿ ಇರುತ್ತವೆ. ಆದುದರಿಂದ ಸಂಸ್ಥೆಯ ಅವಶ್ಯಕತೆಗೆ ಅನುಗುಣವಾಗಿ ಅಗತ್ಯವಿರುವ ಒಬ್ಬರು ಸಹಾಯಕ ಅಭಿಯಂತರರು ಮತ್ತು ಎರಡು ಕಿರಿಯ ಅಭಿಯಂತರರ ಸೇವೆಗಳನ್ನು Consultancy ಆಧಾರದ ಮೇಲೆ ಪಡೆದುಕೊಳ್ಳುವ ಬಗ್ಗೆ ಅನುಮೋದನೆಗಾಗಿ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿತ್ತು.

| ಕ್ರ.ಸಂ. | ಹುದ್ದೆಯ ಪದನಾಮ | ವಿದ್ಯಾರ್ಹತೆ | ವೇತನ ಶ್ರೇಣಿ | ಷರಾ |
|---|---|---|---|---|
| 01 | ಸಹಾಯಕ ಅಭಿಯಂತರರು | B.E in civil from a recognized university | 43100-1100-83900 | |
| 02 | ಕಿರಿಯ ಅಭಿಯಂತರರು | Diploma in Civil & Electrical & Electronic Engineering | 33450-850-62600 | |

ಸದರಿ ವಿಷಯದ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಸರ್ಕಾರದ ನಿರ್ದೇಶನದಂತೆ ಒಬ್ಬರು ಸಹಾಯಕ ಅಭಿಯಂತರರು ಮತ್ತು ಎರಡು ಕಿರಿಯ ಅಭಿಯಂತರರ (Civil and Electrical) ಸೇವೆಗಳನ್ನು Consultancy ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದೆಂದು ಸರ್ವಾನು ಮತದಿಂದ ತೀರ್ಮಾನಿಸಿ ಸದರಿ ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಆಡಳಿತ ಮಂಡಳಿಯ ತೀರ್ಮಾನದಂತೆ ಹಿಮ್ಸ್ ಸಂಸ್ಥೆಗೆ ಒಬ್ಬರು ಸಹಾಯಕ ಅಭಿಯಂತರರು ಮತ್ತು ಎರಡು ಕಿರಿಯ ಅಭಿಯಂತರರ (Civil and Electrical) ಸೇವೆಗಳನ್ನು Consultancy ಆಧಾರದ ಮೇಲೆ ನೇಮಕ ಮಾಡಿಕೊಂಡು ಸದರಿ ಹುದ್ದೆಗಳ ವೇತನವನ್ನು ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 11

**ವಿಷಯ: ಸೀನಿಯರ್ ಸಿಸ್ಟಮ್ ಇಂಜಿನಿಯರ್ ಮತ್ತು ಸಿಸ್ಟಮ್ ಇಂಜಿನಿಯರ್ ಹುದ್ದೆಯನ್ನು ಸೃಜಿಸಿ ಮತ್ತು ಖಾಯಂಗೊಳಿಸಿ ಕೊಡುವ ಬಗ್ಗೆ.**

*–*–*

**ಪ್ರಸ್ತಾವನೆ:**

ಹಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇ-ಆಸ್ಪತ್ರೆ ಕಾರ್ಯಕ್ರಮವು ಅನುಷ್ಠಾನಗೊಂಡಿದ್ದು, ಸದರಿ ವಿಭಾಗದ ಸುಸೂತ್ರ ಕಾರ್ಯ ನಿರ್ವಹಣೆಗೆ ಶ್ರೀ.ಮನೋಹರ್.ಎಂ., ಸೀನಿಯರ್ ಸಿಸ್ಟಮ್ ಇಂಜಿನಿಯರ್ ಮತ್ತು ಶ್ರೀ.ಮದನ್.ಡಿ., ಸಿಸ್ಟಮ್ ಇಂಜಿನಿಯರ್ ಇವರಗಳನ್ನು ನಿರ್ದೇಶಕರು ಡಿ.ಎಂ.ಇ. ಬೆಂಗಳೂರು ಇವರು ಪ್ರತಿ 6 ತಿಂಗಳಿಗೆ ನವೀಕರಿಸುವ ಷರತ್ತಿಗೆ ಒಳಪಟ್ಟು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿ ಹಿಮ್ಸ್ ಬೋಧಕ ಆಸ್ಪತ್ರೆ, ಹಾಸನ ಇಲ್ಲಿಗೆ ಇ–ಆಸ್ಪತ್ರೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವಂತೆ ನೇಮಿಸಿರುತ್ತಾರೆ. ಸದರಿ ಆದೇಶದಂತೆ, ನೇಮಕಗೊಂಡಿರುವ ಶ್ರೀ.ಮನೋಹರ್ ಎಂ., ಇವರು ಕಳೆದ 2 ವರ್ಷದಿಂದ ಸೀನಿಯರ್ ಸಿಸ್ಟಮ್ ಇಂಜಿನಿಯರ್ ಮತ್ತು ಶ್ರೀ ಮದನ್ ಡಿ. ಸಿಸ್ಟಮ್ ಇಂಜಿನಿಯರ್‌ರವರು ಕಳೆದ 9 ತಿಂಗಳಿಂದ ನಮ್ಮ ಸಂಸ್ಥೆಯ ಇ–ಆಸ್ಪತ್ರೆ ಕಾರ್ಯಕ್ರಮವು ಸೇರಿದಂತೆ ಸಂಸ್ಥೆಯಲ್ಲಿ ಎನ್.ಎ.ಬಿ.ಹೆಚ್., ಎನ್.ಬಿ.ಎಲ್., ಯು.ಡಿ.ಐ.ಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಕಾರ್ಯಕ್ರಮಗಳಲ್ಲಿಯೂ ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ, ಮತ್ತು ಕೋವಿಡ್–19ಗೆ ಸಂಬಂಧಿಸಿದಂತೆ ಆನ್‌ಲೈನ್ ಕ್ಲಾಸ್, ವೀಡಿಯೋ ಕಾನ್ಫರೆನ್ಸ್‌ಗಳು ಹಾಗೂ ವಿವಿಧ ವಿಭಾಗಗಳ ಸುಸೂತ್ರ ನಿರ್ವಹಣೆಗೆ ಸಾಫ್ಟ್‌ವೇರ್‌ಗಳನ್ನು ಅಳವಡಿಸಿದ್ದು, ಈ ಸ್ಟಾಪ್‌ವೇರ್‌ಗಳ ನಿರ್ವಹಣೆಯ ಕಾರ್ಯವನ್ನು ಸಿಸ್ಟಮ್ ಇಂಜಿನಿಯರ್ ಮೂಲಕ ನಿರ್ವಹಿಸಲಾಗುತ್ತಿದೆ.

ಮುಂದುವರೆದು ಸಂಸ್ಥೆಯಲ್ಲಿ ಜಾರಿಯಲ್ಲಿರುವ ವಿವಿಧ ಯೋಜನೆಗಳು ಸ್ಟಾಪ್‌ವೇರ್ ನಿರ್ವಹಣೆ ಹಾಗೂ ಇ–ಆಸ್ಪತ್ರೆ ನಿರ್ವಹಣೆ ಸೇರಿದಂತೆ ಇತರೆ ತಾಂತ್ರಿಕ ಸಲಹೆಗಳಿಗಾಗಿ ಸೀನಿಯರ್ ಸಿಸ್ಟಮ್ ಇಂಜಿನಿಯರ್ ಮತ್ತು ಸಿಸ್ಟಮ್ ಇಂಜಿನಿಯರ್ ಹುದ್ದೆಯು ಹಿಮ್ಸ್ ಭೋಧಕ ಆಸ್ಪತ್ರೆಗೆ ಅತ್ಯವಶ್ಯಕವಾಗಿರುವುದರಿಂದ ಸದರಿ ಹುದ್ದೆಗಳನ್ನು ಸೃಜಿಸಿ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರುಗಳನ್ನು ಖಾಯಂಗೊಳಿಸಲುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸದರಿ ಸಿಬ್ಬಂದಿಗಳು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಮುಖಾಂತರ ಗುತ್ತಿಗೆ ಆಧಾರದಲ್ಲಿ ಹಿಮ್ಸ್, ಸಂಸ್ಥೆಗೆ ನಿಯೋಜನೆ ಹೊಂದಿ ಸೇವೆ ಸಲ್ಲಿಸುತ್ತಿರುವುದರಿಂದ ಅದೇ ರೀತಿ ಮುಂದುವರೆಸುವುದು ಸೂಕ್ತವೆಂದು ಪರಿಗಣಿಸಿ ಸದರಿ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 12

ವಿಷಯ: ಸಂಸ್ಥೆಯ ರೇಡಿಯಾಲಜಿ ವಿಭಾಗದ ರೇಡಿಯೋಥೆರಪಿ ಟೆಕ್ನಾಲಜಿಸ್ಟ್ ಪ್ರಸೂತಿ ರಜೆ ಮೇಲೆ ತೆರಳುತ್ತಿರುವುದರಿಂದ ಕ್ಯಾನ್ಸರ್ ರೋಗಿಗಳ ಚಿಕಿತ್ಸಾ ಹಿತದೃಷ್ಟಿಯಿಂದ ಒಬ್ಬರು ರೇಡಿಯೋಥೆರಪಿ ಟೆಕ್ನಾಲಜಿಸ್ಟ್ ನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಬಗ್ಗೆ.

*–*–*

**ಪ್ರಸ್ತಾವನೆ:**

ಸಂಸ್ಥೆಯ ರೇಡಿಯಾಲಜಿ ವಿಭಾಗದಲ್ಲಿ ರೇಡಿಯೋಥೆರಪಿ ಟೆಕ್ನಾಲಜಿಸ್ಟ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ.ಅನುಷಾ ಎಂ.ಆರ್.ರವರು ಪ್ರಸೂತಿ ರಜೆಯ ಮೇಲೆ ತೆರಳುತ್ತಿದ್ದು, ಸದರಿ ವಿಭಾಗದಲ್ಲಿ ಒಬ್ಬರೇ ತಂತ್ರಜ್ಞರಿರುವುದರಿಂದ ರೇಡಿಯೋ ಥೆರಪಿ ವಿಭಾಗದ ಕರ್ತವ್ಯವು ಸ್ಥಗಿತಗೊಳ್ಳುವ ಸಾಧ್ಯತೆ ಇರುತ್ತದೆ. ಸದರಿ ಹುದ್ದೆಗೆ ಅವಶ್ಯಕವಿರುವ ವಿದ್ಯಾರ್ಹತೆ ಮತ್ತು ವೇತನದ ವಿವರವು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಹುದ್ದೆಯ ಪದನಾಮ | ವಿದ್ಯಾರ್ಹತೆ | ವೇತನ ಶ್ರೇಣಿ |
|---|---|---|---|
| 01 | ರೇಡಿಯೋಥೆರಪಿ ಟೆಕ್ನಾಲಜಿಸ್ಟ್ | Diploma in radioation Therapy | 27650–650–29600–750–32600–850–36000–950–39800–1100–46400–1250–52650 |

ಮುಂದುವರೆದು ಕ್ಯಾನ್ಸರ್ ರೋಗಿಗಳ ಚಿಕಿತ್ಸಾ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ಒಂದು ರೇಡಿಯೋಥೆರಪಿ ಟೆಕ್ನಾಲಜಿಸ್ಟ್ ಹುದ್ದೆಯು ಅವಶ್ಯಕವಿದ್ದು, ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಖಾಲಿ ಇರುವ 03 ತಂತ್ರಜ್ಞರ ಎದುರು ಹುದ್ದೆಗೆ ಒಂದು ರೇಡಿಯೋಥೆರಪಿ ಟೆಕ್ನಾಲಜಿಸ್ಟ್ ನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಪ್ರಸ್ತುತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ.ಅನುಷಾ ಎಂ.ಆರ್. ರೇಡಿಯೋಥೆರಪಿ ಟೆಕ್ನಾಲಜಿಸ್ಟ್ ಇವರು ಪ್ರಸೂತಿ ರಜೆಯ ಮೇಲೆ ತೆರಳುತ್ತಿರುವುದರಿಂದ ರೋಗಿಗಳ ಹಿತದೃಷ್ಟಿಯಿಂದ ಪರ್ಯಾಯ ವ್ಯವಸ್ಥೆಯಾಗಿ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಖಾಲಿ ಇರುವ ಎದುರು ಹುದ್ದೆಗೆ ಒಂದು ರೇಡಿಯೋಥೆರಪಿ ಟೆಕ್ನಾಲಜಿಸ್ಟ್‌ನ್ನು ಸದರಿಯವರ ರಜೆಯ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ವೇತನ ಪಾವತಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಜೆಂಡಾ ಕ್ರಮ ಸಂಖ್ಯೆ: 13

ವಿಷಯ : ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಅರ್ಹ ಬಾಬ್ತನ್ನು ಘಟನೋತ್ತರ ಅನುಮೋದನೆ ಮೇರೆಗೆ ಪಾವತಿಸಿರುವುದನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ: ದಿನಾಂಕ:22.11.2019 ರಂದು ನಡೆದ 22ನೇ ಆರ್ಥಿಕ ಸಮಿತಿಯ ನಿರ್ಣಯಗಳು.

*–*–*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿದ್ದು, ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ವೈದ್ಯಕೀಯ ವೆಚ್ಚ ಮರುಪಾವತಿಸಲು ಸಿಜಿಹೆಚ್‌ಎಸ್ ನಿಯಮಾನುಸಾರ ಬಿಲ್ಲುಗಳನ್ನು ಪರಿಶೀಲಿಸಿ ಅರ್ಹ ಮೊತ್ತಕ್ಕೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ಮೇಲು ಸಹಿಯೊಂದಿಗೆ ದೃಢೀಕರಿಸಿದ್ದು ವಿವರ ಕೆಳಕಂಡಂತೆ ಇರುತ್ತದೆ.

| ಕ್ರ.ಸ | ಹೆಸರು | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|---|
| 1 | ಡಾ.ಉಮಾದೇವಿ. ಹೆಚ್.ಆರ್. ಚರ್ಮ ರೋಗ ತಜ್ಞರು | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ ಮತ್ತು ಬಿ.ಪಿ | 6450<br>14568<br>8952<br>12168 | 6250–00<br>14243–00<br>8457–00<br>11968–00 |
| | | | | 42138 | 40918–00 |
| 2 | ಶ್ರೀಮತಿ ಪಾರ್ವತಮ್ಮ ಹೆಚ್.ಎನ್. ಕಛೇರಿ ಅಧೀಕ್ಷಕರು | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಹಾಸನ. | ಸಕ್ಕರೆ ಖಾಯಿಲೆ ಮತ್ತು ಬಿ.ಪಿ. | 3080<br>3382<br>3555<br>3555 | 2380–00<br>3182–00<br>3355–00<br>3355–00 |
| | | | | 13572 | 12272–00 |
| 3 | ಅನಿತ. ಹೆಚ್.ಜಿ. ಪ್ರ.ದ.ಸ. | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | ಗರ್ಭಿಣಿ ಚಿಕಿತ್ಸೆ | 9398<br>691<br>4296 | 6872–00<br>334–00<br>3496–00 |
| | | | | 14385 | 10702–00 |
| 4 | ಸೋನಿ.ಎಂ.ಸಿ. ಶುಶ್ರೂಷಕರು | ಸ್ವಂತ ಸೆಂಟ್ ಜಾನ್ ಮೆಡಿಕಲ್ | CA Left Breast | 2395 | 1995–00 |

| ಕ್ರ | ಹೆಸರು | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|---|
| | | ಕಾಲೇಜು ಬೆಂಗಳೂರು. | | | |
| 5 | ಪ್ರಮೀಳ ಲೋಬೊ ಶುಶ್ರೂಷಕರು | ಸ್ವಂತ ಮಣೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಹಾಸನ. | Fibroid Uterus | 45108 | 19995-00 |
| 6 | ಸಂದೀಪ್.ಎಂ.ಬಿ. ಶುಶ್ರೂಷಕರು | ಪತ್ನಿ ಲಕ್ಷೀ ಆಸ್ಪತ್ರೆ, ಕಡೂರು | LSCS | 29207 | 9916-00 |
| 7 | ಹೇಮಂತ್ ಕುಮಾರ್.ಹೆಚ್.ಸಿ. ಶುಶೂಷ್ರಕರು | ಸ್ವಂತ ಹೆಚ್.ಸಿ.ಜಿ.ಆಸ್ಪತ್ರೆ, ಬೆಂಗಳೂರು. | Chronic Myeloid Leukaemia | 22500<br>32550<br>22050 | 22300-00<br>32350-00<br>21850-00 |
| | | | | 77050 | 76500-00 |
| 8 | ಮಧುಸೂಧನ್. ಯು.ಎನ್. ವಾಹನ ಚಾಲಕ | ಪತ್ನಿ ಜನಪ್ರಿಯ ಆಸ್ಪತ್ರೆ, ಹಾಸನ. | LSCS | 31270 | 9916-00 |
| 16 | ಶೋಭ.ಬಿ.ಪಿ. ಪ್ರ.ದ.ಸ. | ಸ್ವಂತ ಹೇಮಾವತಿ ಆಸ್ಪತ್ರೆ, ಹಾಸನ. | IVAP LTS | 74025 | 46074-00 |
| 10 | ಎಂ.ಲಕ್ಷೀನಾರಾಯಣ ಸಹ ಪ್ರಾಧ್ಯಾಪಕರು | ಸ್ವಂತ ಶ್ರೀ ಹಾಸನಾಂಬ ಗ್ಯಾಸ್ಟ್ರೋಎಂಟರಾಲಜಿ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್, ಹಾಸನ. | ಪಿತ್ತಕೋಶದ ಶಸ್ತ್ರ ಚಿಕಿತ್ಸೆ | 36515 | 14175-00 |
| 11 | ಶ್ರೀಮತಿ ಶೈಲಜಾ.ಕೆ.ಜಿ. ಶುಶ್ರೂಷಕರು | ತಾಯಿ ಅಪೋಲೋ ಹಾಸ್ಪಿಟಲ್ ಮೈಸೂರು | ಮೂಗಿನ ಶಸ್ತ್ರ ಚಿಕಿತ್ಸೆ | 77953 | 6413-00 |
| 12 | ಸುಧಾ.ಹೆಚ್.ಎಮ್. ಸಿನೀಯರ್ ಟೈಪಿಸ್ಟ್ | ಸ್ವಂತ ಜನತಾ ಆಸ್ಪತ್ರೆ ಹಾಗೂ ರಿಸರ್ಚ್ ಕೇಂದ್ರ, ಹಾಸನ. | Infertility treatment<br>Infertility treatment | 13548<br>5717 | 13318-00<br>5498-00 |
| | | | | 19265 | 18816-00 |
| 13 | ಅನಿತಲಕ್ಷೀ. ಎನ್. ಪ್ರ.ಶಾ.ತ್ರ. | ಸ್ವಂತ ಸಿಎಸ್ಐ ರೆಡ್ ಪೆರನ್ ಮೆಮೋರಿಯಲ್ ಹಾಸ್ಪಿಟಲ್, ಹಾಸನ. | LSCS | 43599 | 12445-00 |

| ಕ್ರ.ಸಂ | ಹೆಸರು | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|---|
| 14 | ಲಕ್ಷ್ಮಣ್.ವಿ.ತಳವಾರ್ ವರ್ಕ್ ಶಾಪ್ ವರ್ಕರ್ | ಪತ್ನಿ ಗಿಜಾರೆ ಆಸ್ಪತ್ರೆ, ಬೆಳಗಾವಿ. | LSCS | 20826 | 11019-00 |
| 15 | ನಟರಾಜ್.ಟಿ. ಪ್ರ.ಶಾ.ತ್ರ. | ಸ್ವಂತ ಜಯದೇವ ಆಸ್ಪತ್ರೆ, ಬೆಂಗಳೂರು. ಮಗ ಜಯಶ್ರೀ ನರ್ಸಿಂಗ್ ಆಸ್ಪತ್ರೆ, ಹಾಸನ. | Heart Attack<br>High Fever | 19242<br>4673 | 19041-00<br>3606-00<br>22647-00 |
| 16 | ವನಿತ.ಎನ್.ಎಂ ದ್ವಿ.ದ.ಸ. | ಸ್ವಂತ ರಾಜೀವ್ ನರ್ಸಿಂಗ್ ಆಸ್ಪತ್ರೆ, ಹಾಸನ. | ಡೈಂಗ್ಯು ಜ್ವರ | 8853 | 7513-00 |
| 17 | ಶಂಕರೇಗೌಡ.ಕೆ. | ಸ್ವಂತ ಎದೆನೋವು ಹೃದ್ರೋಗ ಬೆಂಗಳೂರು. | ಎದೆನೋವು | 10251 | 9490-00 |
| 20 | ಶ್ರೀಮತಿ. ಪಿ.ಸಿ.ಸರಸ್ವತಿ ಶೂಶ್ರುಷಕರು | ಸ್ವಂತ ಭವಾನಿ ಆಸ್ಪತ್ರೆ, ಮೈಸೂರು | Cholecystecto my Hysterectomy | 99858 | 29821-00 |
| 21 | ಶ್ರೀಮತಿ ಭಾಗ್ಯ.ಪಿ. ಶುಶ್ರೂಷಕರು | ಸ್ವಂತ ಜೆಎಸ್ಎಸ್, ಮೈಸೂರು. | LSCS | 44443 | 11318-00 |
| 22 | ಅನಂತ. ಹೆಚ್.ಎಸ್. ದ್ವಿ.ದ.ಸ. | ತಾಯಿ ಜನತಾ ಆಸ್ಪತ್ರೆ, ಹಾಸನ. ತಾಯಿ ಜನತಾ ಆಸ್ಪತ್ರೆ, ಹಾಸನ ತಂದೆ ಜನತಾ ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ ಮತ್ತು ಬಿ.ಪಿ.<br>ಹೃದಯ ಸಂಬಂಧ ಖಾಯಿಲೆ ಮತ್ತು ಬಿ.ಪಿ. | 836<br>29645<br>9846<br>40327 | 636-00<br>29052-00<br>9558-00<br>9246-00 |
| 23 | ಅನಿತ ಎಂಜಲೀನ್ ದ್ವಿ.ದ.ಸ. | ಸ್ವಂತ ಜನತಾ ಆಸ್ಪತ್ರೆ, ಹಾಸನ. | ವೈರಲ್ ಫಿವರ್ | 5831 | 5637-00 |
| 21 | ಮಣಿ ಮೇಗಲಾ ಶುಶ್ರೂಷಕಿ | ಸ್ವಂತ ಜನತಾ ಆಸ್ಪತ್ರೆ, ಹಾಸನ. | DM Htnct With Peripheral Neuropathy | 5691 | 5491-00 |

| ಕ್ರ.ಸಂ | ಹೆಸರು | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|---|
| 22 | ವಿನಯ್ ಕುಮಾರ್. ಹೆಚ್.ಆರ್. ಪ್ರ.ಶಾ.ತ್ರ. | ಪತ್ನಿ ಕಾಮಾಕ್ಷಿ ಆಸ್ಪತ್ರೆ, ಮೈಸೂರು. | LSCS | 60369 | 14342–00 |
| 23 | ರೇಣುಕಾ.ಟಿ. ಶಶ್ರೂಷಕರು. | ಸ್ವಂತ ರಾಜೀವ್ ಆಸ್ಪತ್ರೆ, ಹಾಸನ. | Anterior Colporhaphy with PFR | 13210 | 11820–00 |
| | | | | ಒಟ್ಟು ಮೊತ್ತ ರೂ | **4,48,481–00** |

ಮುಂದುವರೆದು ಸದರಿ ಮೊತ್ತವನ್ನು ಅರ್ಹ ಸಿಬ್ಬಂದಿಗಳಿಗೆ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಗಳ ಘಟನ್ನೋತ್ತರ ಅನುಮೋದನೆ ಮೇರೆಗೆ ಪಾವತಿಸಿ ನಂತರ ಸಂಬಂಧಿತ ಸಭೆಗಳಲಿ ಅನುಮೋದನೆ ಪಡೆಯುವಂತೆ ಸಂಸ್ಥೆಯ 22ನೇ ಆರ್ಥಿಕ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಂಡಿರುವ ಹಿನ್ನೆಲೆಯಲ್ಲಿ ಅರ್ಹ ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಪಾವತಿಸಲಾಗಿದ್ದು ಆರ್ಥಿಕ ಸಮಿತಿ ಸಭೆಯ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮರುಪಾವತಿಯನ್ನು ಅರ್ಹ ಸಿಬ್ಬಂದಿ ಯವರಿಗೆ ಆರ್ಥಿಕ ಸಮಿತಿ ಸಭೆ ಮತ್ತು ಆಡಳಿತ ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಣೆಯ ಮೇರೆಗೆ ಪಾವತಿಸಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

'ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.'

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬಹುಮಹಡಿಗಳ ಕಟ್ಟಡ,
ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ನಿರ್ದೇಶಕರು ಹಾಗೂ ಡೀನ್,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ. ಹಾಗೂ ಸದಸ್ಯರು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ, ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.